ಪತ್ರಿಕಾ ತುಣುಕುಗಳು

**PAPER CLIPPINGS**

7

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 22/1/2021

## ಕಾನೂನು ತಿದ್ದುಪಡಿ ತರಲು ಸಚಿವ ಸಂಪುಟ ತೀರ್ಮಾನ

# ವಿವಾಹಿತ ಪುತ್ರಿಗೂ ಅನುಕಂಪ

■ **ವಿಕ ಸುದ್ದಿಲೋಕ** ಬೆಂಗಳೂರು 22/1/21

ಅನುಕಂಪದ ಆಧಾರದ ನೇಮಕದಲ್ಲಿ ವಿವಾಹಿತ ಪುತ್ರಿ ಮತ್ತು ಕುಟುಂಬದ ಸದಸ್ಯರಿಗೆ ನೌಕರಿ ನೀಡುವ ಸಂಬಂಧ ನಿಯಮಕ್ಕೆ ತಿದ್ದುಪಡಿ ತರಲು ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಸಿಎಂ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಅನುಕಂಪದ ಆಧಾರದ ನೇಮಕದಲ್ಲಿ ಹೆಣ್ಣು ಮಕ್ಕಳಿಗೆ ನೌಕರಿ ನೀಡಬಹುದು ಎಂಬ ನಿಯಮವಿತ್ತು ಈಗ ಮದುವೆಯಾದ ಹೆಣ್ಣು ಮಕ್ಕಳು ಹಾಗೂ ಕುಟುಂಬ ಸದಸ್ಯರಿಗೂ ನೀಡಬಹುದು. ಈ ಸಂಬಂಧದಲ್ಲಿ ನಿಯಮ ತಂದು ಅರ್ಹತೆಯ ಆಧಾರದಲ್ಲಿ ಪರಿಗಣಿಸಲಾಗುತ್ತದೆ ಎಂದು ಸಂಪುಟ ಸಭೆ ಬಳಿಕ ಗೃಹ, ಕಾನೂನು ಮತ್ತು ಸಂಸದೀಯ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

**ಅನುಮತಿ ಪಡೆದು ಗೈರು**

ಸಂಪುಟ ಸಭೆಗೆ ಸಚಿವರಾದ ಮಾಧುಸ್ವಾಮಿ, ಎಂ.ಟಿ.ಬಿ.ನಾಗರಾಜ್, ಗೋಪಾಲಯ್ಯ ಮತ್ತಿತರರು ಅನುಮತಿಯೊಂದಿಗೆ ಗೈರು ಹಾಜರಾಗಿದ್ದರು ಎಂದು ಸಚಿವ ಬೊಮ್ಮಾಯಿ ಸ್ಪಷ್ಟಪಡಿಸಿದರು.

''ಸಚಿವ ಸಂಪುಟ ವಿಸ್ತರಣೆ ಬಳಿಕ ಖಾತೆ ಹಂಚಿಕೆ ಮಾಡಲಾಗಿದೆ. ಕೆಲವು ಬದಲಾವಣೆ ಹಿನ್ನೆಲೆಯಲ್ಲಿ ಬುಧವಾರವೇ ಸಂಬಂಧಿಸಿದ ಸಚಿವರೊಂದಿಗೆ ಸಿಎಂ ಮಾತನಾಡಿದ್ದರು. ಗುರುವಾರವೂ ತುಮಕೂರಿನಿಂದ ಬಂದ ಬಳಿಕ ಮಾತುಕತೆ ನಡೆಸಿದ್ದಾರೆ. ಸಚಿವರು ಅವರ ಮನಸ್ಸಿನಲ್ಲಿ ಇರುವುದನ್ನು ಸಿಎಂ ಅವರಿಗೆ ತಿಳಿಸಿದ್ದಾರೆ. ಕೆಲವರು ಸಂಪುಟ ಸಭೆಗೆ ಬರಲಾಗದು. ಅನುಮತಿ ಕೊಡಿ ಎಂದು ಕೇಳಿಕೊಂಡಿದ್ದರು. ಅದರಂತೆ ಸಿಎಂ ಒಪ್ಪಿಗೆ ನೀಡಿದ್ದರು. ಮಾಧುಸ್ವಾಮಿ ಅವರು ತುಮಕೂರಿನಲ್ಲಿ ಬೇರೆ ಕಾರ್ಯಕ್ರಮದ ಕಾರಣ ಅನುಮತಿ ಪಡೆದಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ ಎಲ್ಲರೊಂದಿಗೂ ಕುಳಿತು ಮಾತನಾಡಿ ಅಸಮಾಧಾನವನ್ನು ಪರಿಹರಿಸುವ ಶಕ್ತಿ ಹೊಂದಿದ್ದಾರೆ ಎಂದು ಹೇಳಿದರು.

### ಸಂಪುಟ ಗೋಷ್ಠಿ ಬೊಮ್ಮಾಯಿ ಜವಾಬ್ದಾರಿ

**ಕೆಲ ಸಚಿವರ ಖಾತೆ ಬದಲಾವಣೆಯೊಂದಿಗೆ ಸಚಿವ ಸಂಪುಟ ಸಭೆ ವಿವರ ನೀಡುವ ಸಚಿವರ ಜವಾಬ್ದಾರಿಯಲ್ಲೂ ಬದಲಾವಣೆಯಾಗಿದೆ. ಇದುವರೆಗೆ ಜೆ.ಸಿ.ಮಾಧುಸ್ವಾಮಿ ಈ ಹೊಣೆ ನಿಭ್ಯಾಯಿಸುತ್ತಿದ್ದರು. ಈ ಹೊಸದಾಗಿ ಕಾನೂನು, ಸಂಸದೀಯ ಖಾತೆ ವಹಿಸಿಕೊಂಡಿರುವ ಬೊಮ್ಮಾಯಿ ಅವರಿಗೆ ನೀಡಲಾಗಿದೆ.**



ಬೆಂಗಳೂರಿನಲ್ಲಿ ಕೇಂದ್ರ ಸಚಿವ ಪ್ರತಾಪ್ ಸಾರಂಗಿ ಅವರನ್ನು ಸಿಎಂ ಯಡಿಯೂರಪ್ಪ ಗೌರವಿಸಿದರು.

### ಸಂಪುಟ ಸಭೆ ವಿವರ

- ಕೈಮಗ್ಗ ಅಭಿವೃದ್ಧಿ ನಿಗಮದ ದುಡಿಮೆ ಬಂಡವಾಳದ 24 ಕೋಟಿ ಸಾಲದ ಬ್ಯಾಂಕ್ ಖಾತರಿ 1 ವರ್ಷ ವಿಸ್ತರಣೆ.
- ಇ-ಆಡಳಿತ ಉತ್ತಮಗೊಳಿಸಲು ರಾಜ್ಯದ ವಿಸ್ತೃತ ಜಾಲವನ್ನು 52 ತಹಸೀಲ್ದಾರ್ ಕಚೇರಿ, 30 ಜಿಲ್ಲಾ ತರಬೇತಿ ಕೇಂದ್ರ ಹಾಗೂ ತಾಲೂಕು ಪಂಚಾಯಿತಿ ಕೇಂದ್ರ, ಪ್ರಾದೇಶಿಕ ಆಯುಕ್ತರ ಕೇಂದ್ರಗಳಿಗೆ ವಿಸ್ತರಿಸಲು 35 ಕೋಟಿ ರೂ. ಅನುದಾನ. ಇದರಡಿ ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆಯಾಗಲಿದೆ.
- ಆರ್‌ಡಿಪಿಆರ್‌ನಡಿ ಸ್ವಚ್ಛ ಭಾರತ್ ಮಿಷನ್-2ಕ್ಕೆ ಅನುಮೋದನೆ. ಇದರಡಿ ಮುಂದಿನ 5 ವರ್ಷದಲ್ಲಿ 5.5 ಲಕ್ಷ ಗೃಹ ಶೌಚಾಲಯ ನಿರ್ಮಾಣ.
- ನಗರ ಮತ್ತು ಗ್ರಾಮಾಂತರ ಯೋಜನೆ ವಿಧೇಯಕಕ್ಕೆ ಅನುಮೋದನೆ. ಹೆಚ್ಚಿನ ಶುಲ್ಕ ಸಂದಾಯ ಮಾಡಿ ಹೆಚ್ಚು ಎಫ್‌ಐಆರ್ ಪಡೆಯಲು ಇದರಡಿ ಅವಕಾಶ. ಇದರ ಪ್ರಮಾಣ ನಿರ್ಧರಿಸುವ ಅಧಿಕಾರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದೆ.
- ಗೃಹ ಮಂಡಳಿಯು ಸ್ಥಳೀಯ ಪ್ರಾಧಿಕಾರದ ಅನುಮೋದನೆಯಿಲ್ಲದೆ ನಿರ್ಮಿಸಿದ 65 ವಸತಿ ಬಡಾವಣೆಗಳಿಗೆ ಘಟನೋತ್ತರ ಅನುಮೋದನೆ. ಈ ಪೈಕಿ 59 ಬಡಾವಣೆ ಕಾಮಗಾರಿ ಪೂರ್ಣವಾಗಿದೆ. 6 ಬಡವಾವಣೆ ಕಾಮಗಾರಿ ಪ್ರಗತಿಯಲ್ಲಿದೆ. ಈ ಎಲ್ಲ ಬಡಾವಣೆಗಳನ್ನೂ ಸಕ್ರಮಗೊಳಿಸಲಾಗುವುದು. 2000ನೇ ಇಸವಿಯಿಂದಲೂ ಈ ಪ್ರಕರಣಗಳು ಬಾಕಿಯಿದ್ದವು.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯ ಜಂಟಿ ನಿರ್ದೇಶಕ, ಉಪ ನಿರ್ದೇಶಕರ ನೇಮಕದ ನಿರ್ಬಂಧ ಸಡಿಲಿಸಿ ನೇಮಕಕ್ಕೆ ಕ್ರಮ.
- 62,580 ಅಂಗನವಾಡಿ ಸಹಾಯಕಿಯರು ಹಾಗೂ 65,911 ಅಂಗನವಾಡಿ ಕಾರ್ಯಕರ್ತೆಯರಿಗೆ ಸಮವಸ್ತ್ರ ನೀಡಲು ಕೈಮಗ್ಗ ನಿಗಮದಿಂದ ಸೀರೆ ಖರೀದಿಸಲು(1 ಸೀರೆಗೆ 400 ರೂ.) 10.27 ಕೋಟಿ ರೂ. ನೆರವು. ಒಬ್ಬರಿಗೆ 2 ಸೀರೆ ನೀಡಲಾಗುತ್ತದೆ.
- ಪೋಷಣ್ ಅಭಿಯಾನದಡಿ ಅಂಗನವಾಡಿ ಸಹಾಯಕಿಯರಿಗೆ ಹೆಚ್ಚುವರಿ ಒಂದು ಜೊತೆ ಸಮವಸ್ತ್ರ ನೀಡಲು ಸಮ್ಮತಿ.
- ವಿಕಲಚೇತನರಿಗೆ ಯಂತ್ರಚಾಲಿತ ತ್ರಿಚಕ್ರವಾಹನ ಕೊಡಲು ಆಡಳಿತಾತ್ಮಕ ಅನುಮೋದನೆ. 1,500 ಫಲಾನುಭವಿಗಳಿಗೆ 12.75 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ.
- ನಂಜನಗೂಡು ತಾಲೂಕಿನ ಹೊಸಪುರ ಕೆರೆಯಿಂದ ನೀರನ್ನು ಎತ್ತಿ ನಂಜನಗೂಡು, ಗುಂಡ್ಲುಪೇಟೆಯ 9 ಕೆರೆ, 9 ಸಣ್ಣ ಕಟ್ಟೆ ತುಂಬಿಸುವ 14 ಕೋಟಿ ರೂ. ವೆಚ್ಚದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.
- ಹೊನ್ನಾಳಿ ಕ್ಷೇತ್ರದ 19 ಕೆರೆಗೆ ತುಂಗಭದ್ರಾದಿಂದ ನೀರು ತುಂಬಿಸುವ ಬೆನಕೇನಹಳ್ಳಿ ಏತ ನೀರಾವರಿ ಯೋಜನೆಗೆ 48 ಕೋಟಿ ರೂ. ಡಿಪಿಆರ್‌ಗೆ ಅಸ್ತು.
- ಜಂಟಿ ಸದನ ಉದ್ದೇಶ ಉದ್ದೇಶಿಸಿ ರಾಜ್ಯಪಾಲರು ಮಾಡಲಿರುವ ಭಾಷಣದ ಕರಡು ಪ್ರತಿಗೆ ಅನುಮೋದನೆ.